IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ತೆರೆದ ಬಾಗಿಲು : ಒಂದು ವಿವೇಚನೆ

ಡಾ. ಚಂದ್ರಾವತಿ ಶೆಟ್ಟಿ

ಸಹ ಪ್ರಾಧ್ಯಾಪಕರು,

ಕನ್ನಡ ವಿಭಾಗ

ಶ್ರೀ ಶಾರದಾ ಕಾಲೇಜು, ಬಸ್ರೂರು

## I. INTRODUCTION

ಮೈಸೂರು ಮಲ್ಲಿಗೆ ಕವನ ಸಂಕಲನದ ಮೂಲಕ ಜನಪ್ರಿಯತೆಯನ್ನು ಗಳಿಸಿರುವ ಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರ ವಿಶಿಷ್ಟವಾದ ಕವನಗಳಲ್ಲಿ 'ತೆರೆದ ಬಾಗಿಲು 'ಒಂದಾಗಿದೆ. ಇದು ನವ್ಯ ಪರಂಪರೆಯ ಕವಿತೆಯಾಗಿದೆ.

ಆಧುನಿಕ ಬದುಕಿನ ಅವಘಡ ,ಅಸ್ತವ್ಯಸ್ತತೆ; ದುರಂತಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡುವ ಈ ಕವನ ,ಅಸಂಬದ್ಧತನ ಅಥವಾ ವರ್ತನೆ ಸ್ಥಿತಿ ತೀರಾ ವೈಯಕ್ತಿಕವಾದ ಲೌಕಿಕಾಸಕ್ತಿ ಬದುಕಿನ ಬಗೆಗಿನ ಅನನ್ಯ ನಿರಾಸಕ್ತಿ , ತನ್ನನ್ನೇ ಗುರುತಿಸಿಕೊಳ್ಳದ ಅವ್ಯಕ್ತ ಸ್ಥಿತಿ , ತನ್ನತನದ ಅಸ್ತಿತ್ವ ಹೀನತೆ ನಲ್ಲಿಯೇ ನೀರೇ ಗಂಗಾ ಸ್ನಾನ ವಾದ ಅವಗಡ ಸ್ಥಿತಿ ,ಸಾವಿನ ಭೀತಿಯ ಹಿನ್ನಲೆಯಲ್ಲಿ ಬೆನ್ನು ಬಿಡದೆ ಮೂಢನಂಬಿಕೆ ಹಾಗೂ ವ್ಯರ್ಥ ಸಾಂಪ್ರದಾಯಿಕ ಆಚರಣೆ ಹೀಗೆ ಹನುಮನ ಬಾಲದಂತೆ ಬೆಳೆಯುವ, ಆಧುನಿಕತೆಯ ಅಥವಾ ನವ ನಾಗರಿಕತೆಯ ದುರಂತಗಳ ಚಿತ್ರಣವನ್ನು ಈ ಕವನದಲ್ಲಿ ಕಾಣಬಹುದು.

ಕೆ .ಎಸ್. ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಕವನದ ಪ್ರಾರಂಭವೂ ಅತ್ಯಂತ ವಿಶಿಷ್ಟವಾದದ್ದು.ಮನುಷ್ಯನ ಅಸಂಬದ್ಧ ವರ್ತನೆ ಯಿಂದ ವಿಷಯದ ತುದಿ ಮೊದಲಿಲ್ಲದ, ಎಲ್ಲಿಂದಲೂ ಪ್ರಾರಂಭವಾಗಿ ,ಇನ್ನೆಲ್ಲೆಲ್ಲೋ ಹರಿದಾಡಿ, ಇನ್ನೆಲ್ಲಿಯೋ ಮುಕ್ತಾಯವಾಗಿ ಬಿಡುವುದು. ಈ ಕವನದ ನಾಯಕ ತನ್ನ ವೈಯಕ್ತಿಕ ಬದುಕಿನ ಬಗ್ಗೆ ಏನೇನು ಅಸಂಬದ್ಧವಾಗಿ ಹೇಳಿಬಿಡುತ್ತಾನೆ. ತನ್ನ ಹೆಂಡತಿಯ ತವರಿಂದ ಬಂದವರಂತಿದ್ದ ಆಪ್ತರೊಂದಿಗೆ ತವರಿಗೆ ಹೋದ, ತನ್ನ ಹೆಂಡತಿಯ ವಿಷಯವಾಗಿ ಸ್ವಗತ ಭಾಷೆ ಎಂಬಂತೆ ಮಾತನಾಡುತ್ತಾನೆ."ಸಂಜೆಯಾಯಿತು ನೀನೂ ಬಂದೆ .ಸಂತೆಯ ದಿನ ನಿನಗೆ ಬಸ್ಸು ಸಿಕ್ಕಿತೇ ? ನಿನ್ನ ಮಗುವಿಗೆ ಎಂದು ನಾಮಕರಣ? ಇವಳು ಹೇಗಿದ್ದಾಳೆ? ಎಂದು ಬರುವಳು ? ಗೊತ್ತು ಬಂದೇ ಬರುವಳು ಆದರೆ ಈ ಹೊತ್ತಿಗೆ ಭತ್ತ ಬಡಿದಿರಬೇಕು .ಬಂಡಿ ಸಿಕ್ಕಿರಬೇಕು.ಎತ್ತಿಗೆ ಕ್ಷಾಮವಿರಬೇಕು. ಕಾರಣವಿಷ್ಟೇ ಈ ಸಲವು ಪ್ರತಿ ಸಲದಂತೆ ತಂದೆ ಬರುವ ಶನಿವಾರ ಕಳಿಸಿ ಕೊಡುವುದಾಗಿ ಹೇಳಿರಬೇಕು. ಭತ್ತ ಬರದಿದ್ದರೂ ಬಾಳೆಯಾದರೂ ಬರಲಿ. ಹೀಗೆ ಅಸಂಬದ್ಧವಾಗಿ ನುಡಿಯುತ್ತಾನೆ .ಕವಿಯ ಈ ಅಸಂಬದ್ಧತೆಯ ಮಾತಿನ ಹಿಂದೆ ಬದುಕಿನ ಬಗೆಗಿನ ಒಂದು ವಿಶಿಷ್ಟ ಕಾಣ್ಕೆಯು ತೆರೆದು ತೋರುತ್ತದೆ.ಕವಿ ತೆರೆದು ತೋರಿದ ವಿಶಿಷ್ಟವಾದ ಕಾಣ್ಕೆ 'ತೆರೆದ ಬಾಗಿಲು' ಅದುವೇ ಆಧುನಿಕ ಬದುಕಿನ ದುರಂತತೆಯಾಗಿದೆ.

ತವರಿಗೆ ಹೋದ ಹೆಂಡತಿ ತನ್ನ ಮಕ್ಕಳೊಂದಿಗೆ ಬೇಗ ಹಿಂದಿರುಗದಿರುವುದರ ಹಿನ್ನೆಲೆಯಲ್ಲಿ ಹೊರಗೆ ಹೋದವರು ತಿರುಗಿ ಹೋದಂತೆ ಬರುವರೆಂಬ ನಂಬಿಕೆ ಇಂದಿನ ಯಂತ್ರ ಯುಗದಲ್ಲಿ ಅಸಾಧ್ಯ ಎಂಬ ವಿಶಿಷ್ಟ ಧ್ವನಿಯನ್ನು ತೆರೆದು ತೋರಿಸುತ್ತಾರೆ. "ನಾನು ಎಲ್ಲಕ್ಕೂ ಮೊದಲೇ ಮೊದಲ ಬಸ್ಸಿನಲ್ಲೇ ಕಾಗೆ ಕೂಗುವ ಹೊತ್ತಿಗೆ ನಿಂತ ಮೆಟ್ಟಿನಲಿ ಸುಬ್ಬುವನ್ನೊಡಿಸಿದ್ದು" ಎಂಬ ಮಾತು ಇಂಥ ಭೀತಿ ಯನ್ನು ಬಹುಸ್ಪಷ್ಟವಾಗಿ ಹೇಳುತ್ತದೆ.

"ಅರ್ಥ ಮಾಡಿಕೋ ಈಗ ಮುಂದಿನ ವಿಚಾರವನು ಈ ದಿನದ ಸಂದರ್ಭದಲ್ಲಿ ತಿಳಿಯಿತೇ ?"ಎಂಬ ಕವನದ ಮುಂದಿನ ಸಾಲು ತುಂಬಾ ಧ್ವನಿ ಪೂರ್ಣವಾದುದು. ತನ್ನ ಹೆಸರಿನ ಯಾವನೋ ಒಬ್ಬನು ಸತ್ತರೆ ಆ ಹೆಸರಿನ ಇನ್ನೊಬ್ಬ ಕಳವಳಗೊಳ ಭೀತಿಗಳನ್ನು ಸತ್ತುಗಳು ತಾನಲ್ಲವೆಂದು ಗೊತ್ತಾದಾಗ ಮತ್ತೆ ವ್ಯರ್ಥ ಸಂಪ್ರದಾಯಕ್ಕೆ ಮರೆಹೋಗುವುದು ಇದೆಲ್ಲ ಆಧುನಿಕ ಬದುಕಿನ ದುರಂತಗಳಲ್ಲಿ ಒಂದು ತನ್ನ ಹೆಸರಿನ ಯಾವುದನ್ನು ಅಪಘಾತದಲ್ಲಿ ಪತ್ರಿಕೆಯಿಂದ ಓದಿ ತಿಳಿದ ಕವನದ ನಾಯಕ ನನ್ನ ಮೇಲೆ ಆಕಾಶವೇ ಕಳಚಿ ಬಿದ್ದಷ್ಟು ಭಯಭೀತನಾಗುತ್ತಾನೆ ಸತ್ತವನು ತಾನಲ್ಲವೆಂಬ ಸತ್ಯ ಗೊತ್ತಾದರೂ ಅನುಮಾನ. ಕೊನೆಗೆ ತಾನು ಸತ್ತಿಲ್ಲವೆಂಬುದನ್ನು ಖಾತರಿ ಮಾಡಿಕೊಂಡು ಯಾರೋ ಸತ್ತು ತನ್ನ ಹೆಸರಿಗೆ ಬಂದ ಕಳಂಕವನ್ನು ತೊಳೆದುಕೊಳ್ಳುತ್ತಾನೆ. ಇದಾದ ನಂತರ ಪತ್ರಿಕಾ ಸಂಪಾದಕರಿಗೆ ಫೋನ್ ಮಾಡಿ ತಾನು ಸತ್ತಿಲ್ಲ ಸತ್ತವನು ನಾನಲ್ಲ

ಎಂಬುದನ್ನು ಖಾತ್ರಿಪಡಿಸುತ್ತಾನೆ. "ನಾನು ಬದುಕಿದ್ದೇನೆ ದಯಮಾಡಿ ತಿದ್ದುವಿರಾ?" ಎಂದು ಕೇಳಿಕೊಳ್ಳುತ್ತಾನೆ .ಆಗ ಸಂಪಾದಕ ತೋರುವ ನಿರ್ಲಿಪ್ತತೆ ಸಮಾಧಾನಗಳನ್ನು ಕವಿ ಎಷ್ಟು ನಿರ್ಲಿಪ್ತತೆ? ಎಂಥಾ ಸಮಾಧಾನ, ರಾಮ ರಾಮ ಎಂದು ಉದ್ಗರಿಸುತ್ತಾನೆ ಇದು ಆಧುನಿಕ ಜೀವನದ ಒಂದು ವಿಶಿಷ್ಟತೆ ಎಂಬುದನ್ನು ಕವನ ಸೂಚ್ಯವಾಗಿ ತಿಳಿಸುತ್ತದೆ.

ಆಧುನಿಕ ಮನುಷ್ಯ ತನ್ನನ್ನು ತಾನು ಗುರುತಿಸಿಕೊಳ್ಳದ ಸ್ಥಿತಿಗೆ ಬಂದು ಮುಟ್ಟಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪರಾವಲಂಬಿಯಾದ ಬಗೆ ಯನ್ನು ಕವಿ ವಿವರಿಸುತ್ತಾ -ಅವನು ಇದ್ದದ್ದೇ ಅಷ್ಟಾಗಿ ತಿಳಿದಿರಲಿಲ್ಲ. ಸತ್ತದ್ದು ಎಲ್ಲರಿಗೂ ಗೊತ್ತಾಯಿತು. ಇದ್ದಾಗ ತನ್ನನ್ನು ಗುರುತಿಸಿಕೊಳ್ಳಲಾಗದೆ ಸತ್ತ ಮೇಲೆ ಗುರುತಿಸಿಕೊಳ್ಳುವ ವ್ಯಕ್ತಿಯ ,ಅವಘಡದ ಆಧುನಿಕ ಪರಿಸ್ಥಿತಿಯ ದರ್ಶನ ಮಾಡಿಸುತ್ತಾರೆ.

ಆಧುನಿಕ ಪರಿವರ್ತನೆಯ ಬದುಕು ಒಟ್ಟಾರೆ ಮನುಷ್ಯನ ಬದುಕಿನ ಎಲ್ಲಾ ಅವಘಡಕ್ಕೂ ಕಾರಣವಾಗುತ್ತದೆ.

"ಚಾಕು ಹೋಯಿತು ಕಂದ ಚೂರಿ ಬಂತು
ಕಪ್ಪು ಸೀರೆಯನ್ನು ಟ್ಟು ಕಣ್ಣೀರ ಹೂ ಮುಡಿದ
ಸಂತಾಪ ಪತ್ರಗಳ ನೆನಪಾಯಿತು;

ವಿಪರೀತ ಭಯವಾಯಿತು".ಜೀವನ ನಿರ್ವಹಣೆಗೆ ಬಳಕೆಗೊಳ್ಳಬೇಕಾದ ವಸ್ತು ಇಂದು ಭಯೋತ್ಪಾದನೆ ಆಯುಧಗಳಾಗಿ ಬಳಕೆಗೊಳ್ಳುವ ದುರ್ದರ ಪ್ರಸಂಗ ಎದುರಾಗಿದೆ ಆದರೆ ಇದು ದಾರಿ ತಪ್ಪುವ ಸ್ಥಿತಿ ದಾರಿ ತಪ್ಪುವುದು ಇಲ್ಲಿ ಯಾರಿಗಾದರೂ ಸುಲಭವೇ ಹೀಗಾಗಿ ನಿನ್ನ ಆರದು ಮನೆಗೆ ಬರಬೇಕಾದವರು ಇನ್ನಾರದೋ ಮನೆಗೆ ಬರುವ ಅವಗಡವು ಇದೆ. ಊರು ಆಧುನೀಕರಣದ ಫಲವಾಗಿ ಪರಿವರ್ತನೆಗೊಂಡು ಒಂದೇ ತರಹ ಕಾಣುತ್ತಿದ್ದ ಅವಘಡದ ಸಂದರ್ಭದಲ್ಲಿ, ಮೂವರು ಎಲ್ಲಿ ಬೀದಿ ತಪ್ಪಿ ತಮ್ಮ ಮನೆಗೆ ಬಂದರೇನು ಎಂಬ ಅನುಮಾನ ನಾಯಕನನ್ನು ಕಾಡುತ್ತದೆ. ಇಲ್ಲಿ ಕಥಾನಾಯಕನ ಮನೆಗೆ ಮೂವರು ಬಂದಾಗ ಯಾರದೋ ಮನೆಗೆ ಬರಬೇಕಾದವರು ದಾರಿ ತಪ್ಪಿ ತನ್ನ ಮನೆಗೆ ಬಂದರೇನೋ ಎಂದು ಭಾವಿಸುತ್ತಾನೆ .ಇಲ್ಲಿನ ಧ್ವನಿ ವಿಶಿಷ್ಟವಾದದ್ದು. ಯಾರದೋ ಬೀದಿ ಗೋ ಯಾರದೋ ಮನೆಗೆ ಬರಬೇಕಾದ ಮೂವರುದಾರಿ ತಪ್ಪಿ ಇನ್ನು ಯಾರದ್ದೋ ಬೀದಿಗೋ ಮನೆಗೋ ಬಂದು ಬಿಡುತ್ತಾರೆ ಎಂಬ ಭೀತಿ ಇಲ್ಲಿಯದು. ಈ ಭೀತಿ ಯಾಕೆಂದರೆ ಚಾಕು ಹೋಗಿ ಚೂರಿ ಬಂದಿರುವ ಕಾಲಮಾನ . ಇಲ್ಲಿ ನಾಯಕನ ಮನೆಗೆ ಬಂದಿರುವ ಮೂವರು ಯಮನಾಗಿ ಬರುವುದಿಲ್ಲ ಆ ಮನೆಯಲ್ಲಿ ಶಾಂತಿ ಸ್ಥಾಪಿಸಿ ಹೋಗಲು ಪ್ರಯತ್ನಿಸುತ್ತಾರೆ. ಆದರೆ ಆಧುನಿಕ ಪರಿಸ್ಥಿತಿ ಇಂಥವರನ್ನು ಕಂಡು ಏನೇನು ಕಲ್ಪಿಸಿಕೊಂಡು ಭೀತಿ ಗೊಳಗಾಗುವಂತಾಗಿದೆ.

" ಐವತ್ತು ಕಳೆದರೂ ಐವತ್ತು ಉಳಿದಿತ್ತು;
ನನ್ನ ಸಂದರ್ಭದಲ್ಲಿ ಅಷ್ಟು ಸಾಕೆಂದೆದ್ದೆ
ಶಾಂತವಾಯಿತು ಕಡಲು ಶಾಂತವಾಯಿತು ಗಗನ;
ಶಾಂತವಾಯಿತು ನಾನು ನಿಂತ ಭೂಮಿ.
ತೆರೆದ ಬಾಗಿಲನವರು ಅವರು ದಾಟಿ ಹೋದುದ ಕಂಡೆ;
ನೆಲದ ಮೇಲೆಲ್ಲೆಲ್ಲಾ ಮಂತ್ರಾಕ್ಷತೆ."

ಅನ್ಯಾಯ ಅಧರ್ಮ ಭಯಾನಕತೆ ಕ್ರೌರ್ಯ ಹತ್ಯಾಕಾಂಡದಂಥ ಅಮಾನವೀಯ ಪರಿಸ್ಥಿತಿ ಬಂದಾಗ ಇವೆಲ್ಲ ತಡೆದು ತಕ್ಕಮಟ್ಟಿನ ಶಾಂತಿಯನ್ನಾದರೂ ಸ್ಥಾಪಿಸುವ ಶಕ್ತಿ ಒಂದು ಬಂದೇ ಬರುತ್ತದೆ .ಕವನದಲ್ಲಿ ಬರುವ ಆ ಮೂವರು ಇಂತಹ ಅವಧೂತರು. ಅವರು ಬಂದದ್ದು ಹೊಟ್ಟೆ ಹಸಿವಿನಿಂದಲ್ಲ ;ಮಾನವೀಯತೆಯ ಅಭಾವದ ಹಸಿವಿನಿಂದ. ಆದರೆ ಇಂಥವರನ್ನು ಅನುಮಾನದಿಂದ ನೋಡುವ ಹಾಗೂ ಇಂಥವರ ಬಗ್ಗೆ ಅನುಮಾನ ಪಡುವ ವಾತಾವರಣ ಆಧುನಿಕದಾಗಿದೆ. ಅವರು ಹೊರಟು ಹೋದ ನಂತರ ಪುಣ್ಯವೇ ಮೈವೆತ್ತು ಬಂದ ಅವರ ಮಹಿಮೆ ಆಗಮನದ ಉದ್ದೇಶ ತಿಳಿಯುವುದು. ಅವರ ಆಗಮನದ ಪ್ರಭಾವದ ಫಲವಾಗಿ ಕೊನೆಗೂ ಕಡಲು, ಮನುಷ್ಯ ನಿಂತ ನೆಲ ಎಲ್ಲವೂ ಶಾಂತವಾಯಿತು .ಆಗ ಕವಿ ಐವತ್ತು ಕಳೆದರು ಐವತ್ತು ಉಳಿದಿತ್ತು ಎಂದು ಸಂತಸ ವ್ಯಕ್ತಪಡಿಸುತ್ತಾನೆ.

ಹೀಗೆ ಕೆ.ಎಸ್ ನರಸಿಂಹ ಸ್ವಾಮಿ ಅವರ 'ತೆರೆದಬಾಗಿಲು' ಕವನ, ಮನುಷ್ಯ ತನ್ನ ಜೀವನದ ಲ್ಲಿ ಬರುವುದನ್ನೆಲ್ಲಾ ಸ್ವಾಗತಿಸಿದರೆ ಒಂದಲ್ಲ ಒಂದು ವಿಚಾರ ಆತನಿಗೆ ಸಂತಸವನ್ನು ನೀಡುವ ಪರಿಯನ್ನು ನಿರೂಪಿಸುತ್ತದೆ.

ಗ್ರಂಥ ಋಣ


1. ಮೈಸೂರು ಮಲ್ಲಿಗೆ
   ಕವಿ ಕೆ.ಎಸ್. ನರಸಿಂಹ ಸ್ವಾಮಿ.
   ಪ್ರಕಾಶನ: ಸ್ಟ್ಯಾಂಡರ್ಡ್ ಬುಕ್ ಕಂಪನಿ
   ಬೆಂಗಳೂರು –2014.

2. ತೆರೆದ ಬಾಗಿಲು
   ಕವಿ : ಕೆ.ಎಸ್. ನರಸಿಂಹಸ್ವಾಮಿ
   ಪ್ರಕಟಣೆ: ವಸಂತ ಪ್ರಕಾಶನ
   ಬೆಂಗಳೂರು –2017.